## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 387
ಉತ್ತರಿಸಬೇಕಾದ ದಿನಾಂಕ : 06.03.2020
ಸದಸ್ಯರ ಹೆಸರು : ಶ್ರೀಮತಿ ಎಸ್.ವೀಣಾ ಅಚ್ಚಯ್ಯ
(ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು : ಮಾನ್ಯ ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ | Reply |
|---|---|---|---|
| ಅ) | ಕೊಡಗು ಜಿಲ್ಲೆಯಲ್ಲಿ ಕೆ.ಎಸ್.ಸಿ.ಎ. ಮೂಲಕ ನಿರ್ಮಾಣವಾಗಬೇಕಾಗಿದ್ದ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ ಕಾಮಗಾರಿ ಹಲವಾರು ವರ್ಷಗಳಿಂದ ನೆನಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು | Yes |
| ಆ) | ಬಂದಿದ್ದಲ್ಲಿ, ಸದರಿ ಕ್ರೀಡಾಂಗಣ ನಿರ್ಮಾಣ ಕಾಮಗಾರಿ ಇಷ್ಟು ವರ್ಷಗಳ ನಂತರವೂ ಪ್ರಾರಂಭವಾಗದಿರಲು ಕಾರಣಗಳೇನು; | ಕಂದಾಯ ಇಲಾಖೆಯ ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ.20 ಎಲ್.ಜಿ.ಓ 2015, ಬೆಂಗಳೂರು, ದಿನಾಂಕ: 31.12.2015ರನ್ವಯ ಹೊದ್ದೂರು ಗ್ರಾಮದಲ್ಲಿ ಸರ್ವೆ ನಂ.167/1ಎ ರ 12.70 ಎಕರೆ ಜಮೀನನ್ನು ಕ್ರಿಕೆಟ್ ಕ್ರೀಡಾಂಗಣ ಅಭಿವೃದ್ಧಿಗೆ ಲೀಸ್ ಡೀಡ್ ದಿನಾಂಕ: 06.06.2016 ರನ್ವಯ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಎರಡು ವರ್ಷಗಳೊಳಗೆ ಕ್ರೀಡಾಂಗಣ ಅಭಿವೃದ್ಧಿ ಮಾಡುವ ಷರತ್ತಿಗೊಳಪಟ್ಟು ನೀಡಲಾಗಿದೆ. ದಿನಾಂಕ: 09-10-2018 ರ ಕಂದಾಯ ಇಲಾಖೆಯ ಪತ್ರದನ್ವಯ ಸದರಿ ಜಮೀನಿನಲ್ಲಿ 0.50 ಎಕರೆ ನಿವೇಶನವನ್ನು ಸಾರ್ವಜನಿಕ ಸ್ಮಶಾನಕ್ಕಾಗಿ ಕಾಯ್ದಿರಿಸಲಾಗಿದೆ. ಸದರಿ ಆದೇಶದ ವಿರುದ್ಧ ಕರ್ನಾಟಕ ರಾಜ್ಯ | 12.70 acres of land has been allocated to Karnataka State Cricket Association for development of Cricket Stadium in Hoddur village in Kodagu district as per the lease deed dated: 06-06-2016 vide the Government Order No: RD20 LGO 2015, Bangalore, Dated: 31.12.2015 with a condition to develop the Stadium within two years. In the said plot, 0.50 acres has been earmarked for public crematorium as per the letter dated: 09-10-2018 by the Revenue Department. A petition has been filed by the Karnataka State Cricket Association in the Hon'ble High Court |

| | | | |
|---|---|---|---|
| | | ಕ್ರಿಕೆಟ್ ಸಂಸ್ಥೆಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತದೆ. ಕ್ರಿಕೆಟ್ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸಲು ಲೀಸ್ ಆಧಾರದಲ್ಲಿ ನೀಡಲಾದ ಜಮೀನನ್ನು ಸರ್ವೆ ಮಾಡಿ, ಗಡಿ ಗುರುತಿಸಿ, ಹಸ್ತಾಂತರಿಸಲು ಕೊಡಗು ಜಿಲ್ಲಾಡಳಿತವನ್ನು ಕೆ.ಎಸ್.ಸಿ.ಎ. ರವರು ಕೋರಿರುತ್ತಾರೆ. ಈ ಸಂಬಂಧ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತಾಲಯದಿಂದ ದಿನಾಂಕ: 03-03-2020 ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ ರವರನ್ನು ಪ್ರಶ್ನಿತ ಜಮೀನಿನ ಸರ್ವೆ ಕೈಗೊಂಡು, ಗಡಿ ಗುರುತು ಮಾಡಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಹಸ್ತಾಂತರಿಸುವಂತೆ ಕೋರಿ ಪತ್ರ ವ್ಯವಹಾರ ಮಾಡಲಾಗಿದೆ. | against this allocation. The KSCA has requested the District Administration to hand over the land after conducting a survey and delineating the boundaries of the allocated land. The Commissionerate of Youth Empowerment and Sports has written letter on 03-03-2020 to the Deputy Commissioner, Kodagu to hand over the land to Karnataka State Cricket Association after conducting the survey and delineating the boundaries of the property in question. |
| ಇ) | ಯಾವ ಕಾಲಮಿತಿಯೊಳಗೆ ಈ ಕ್ರೀಡಾಂಗಣ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು? | ಕೊಡಗು ಜಿಲ್ಲಾಡಳಿತವು ಕ್ರಿಕೆಟ್ ಕ್ರೀಡಾಂಗಣ ಅಭಿವೃದ್ಧಿಗಾಗಿ ಲೀಸ್ ಆಧಾರದಲ್ಲಿ ಒದಗಿಸಿರುವ ನಿವೇಶನದ ಸರ್ವೆ ಕೈಗೊಂಡು, ಗಡಿ ಗುರುತಿಸಿ, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಹಸ್ತಾಂತರಿಸಿದ ನಂತರ ಕ್ರೀಡಾಂಗಣ ಅಭಿವೃದ್ಧಿಗೆ ಪೂರ್ವ ತಯಾರಿ ಕಾರ್ಯ ಆರಂಭಿಸುವುದಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ತಿಳಿಸಿದೆ. | The Karnataka State Cricket Association (KSCA) has stated that preliminary developmental works for construction of the Cricket Stadium will commence after the leased land is handed over to the KSCA by the District Administration, Kodagu |

ವೈಎಸ್ ಡಿ-/ಇಬಿಬಿ/12/2020

(ಸಿ. ಟಿ. ರವಿ)

ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ
ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.